# JUNE 10, 2024

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಎನ್.ಡಿ.ಎ. ಮೈತ್ರಿಕೂಟದ ನಾಯಕರಾದ,** ನರೇಂದ್ರ ಮೋದಿ, ಮೂರನೇ ಅವಧಿಗೆ, ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ.
- **ವಿನಮ್ರರಾಗಿರಿ; ವಿನೀತರಾಗಿರಿ,** ಸಂಪುಟದ ನೂತನ ಸಹೋದ್ಯೋಗಿಗಳಿಗೆ, ಪ್ರಧಾನಮಂತ್ರಿ, ಮಾರ್ಗದರ್ಶನ.
- **ಸಾಮ್ರಾಟ್ ಅಶೋಕನ ಸನ್ನತ್ತಿ** ಮತ್ತು ಕಣಗನಹಳ್ಳಿ ಶಾಸನಗಳು, ಭಾರತದ ಐತಿಹಾಸಿಕ ಬಾಂಧವ್ಯದ ಕುರುಹು – ಡಾಕ್ಟರ್ ರೇಷ್ಮಾ ಸಾವಂತ.
- **ಶಿವಮೊಗ್ಗದಲ್ಲಿ,** ಎರಡು ದಿನಗಳ ದೇಶಿ ಬೀಜೋತ್ಸವ, ಯಶಸ್ವಿ ಸಂಪನ್ನ.

<><><>

**ಈಗ ವಾರ್ತೆಗಳ ವಿವರ**

<><><>

**ಎನ್.ಡಿ.ಎ. ಮೈತ್ರಿಕೂಟದ ಗೆಲುವಿನೊಂದಿಗೆ, ನರೇಂದ್ರ** ಮೋದಿ ಅವರು, ಸತತ ಮೂರನೇ ಅವಧಿಗೆ, ಭಾರತದ ಪ್ರಧಾನಮಂತ್ರಿಯಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು. ಈ ಮೂಲಕ, ಪಂಡಿತ್ ಜವಹರಲಾಲ್ ನೆಹರು ಅವರ, ದಾಖಲೆಯನ್ನು ಸರಿಗಟ್ಟಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ, ಮೋದಿ ಅವರು ವೃಶ್ಚಿಕ ಲಗ್ನ ಮಹೂರ್ತದಲ್ಲಿ, ಸಂಜೆ 7 ಗಂಟೆ 24 ನಿಮಿಷಕ್ಕೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ, ಅಧಿಕಾರ ಮತ್ತು ಗೋಪ್ಯತೆಯ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

<><><>

**ಪ್ರಲ್ಹಾದ್ ಜೋಶಿ, ಎಚ್.ಡಿ.ಕುಮಾರಸ್ವಾಮಿ** ಹಾಗೂ ನಿರ್ಮಲಾ ಸೀತಾರಾಮನ್ ಅವರಿಗೆ ಸಂಪುಟ ದರ್ಜೆ ಹಾಗೂ ವಿ.ಸೋಮಣ್ಣ ಮತ್ತು ಶೋಭಾ ಕರಂದ್ಲಾಜೆ ಅವರಿಗೆ ಸಹಾಯಕ ಸಚಿವರ ಸ್ವತಂತ್ರ ಖಾತೆ ನೀಡಲಾಗಿದೆ.

<><><>

**ಮೂರನೇ ಅವಧಿಯ ಮೋದಿ** ನೇತೃತ್ವದ ಸಚಿವ ಸಂಪುಟದ ಮೊದಲ ಸಭೆ ಇಂದು ಸಂಜೆ ದಿಲ್ಲಿಯ ಲೋಕಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಿ ನಿವಾಸದಲ್ಲಿ ನಡೆಯಲಿದೆ ಎಂದು ಸುದ್ದಿಸಂಸ್ಥೆ ವರದಿ ಮಾಡಿದೆ.

<><><>

**ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೂ ಮೊದಲು,** ಸಂಪುಟದ ನೂತನ ಸಹೋದ್ಯೋಗಿಗಳೊಂದಿಗೆ ಮಾತನಾಡಿದ, ನಿಯೋಜಿತ ಪ್ರಧಾನಮಂತ್ರಿಯವರು, ಸಚಿವರಾದವರು, ವಿನಮ್ರರಾಗಿರಿ; ವಿನೀತರಾಗಿರಿ. ಇಲಾಖೆಯ ಕೆಲಸದ ಜೊತೆಗೆ ಕ್ಷೇತ್ರದ ಅಭಿವೃದ್ಧಿ ಹಾಗೂ ಜನರ ಕಡೆಗೂ ಗಮನ ಕೊಡಬೇಕು. ಸೋಮವಾರದಿಂದ ಗುರುವಾರ ಇಲಾಖೆ ಕೆಲಸ ನಿರ್ವಹಿಸಿ, ಶುಕ್ರವಾರದಿಂದ ಭಾನುವಾರದ ವರೆಗೆ ತಮ್ಮ ಕ್ಷೇತ್ರಗಳಲ್ಲಿದ್ದು ಜನರೊಂದಿಗೆ ನಿರಂತರ ಸಂಪರ್ಕ ಸಾಧಿಸಿ, ವಿಕಸಿತ ಭಾರತ ಪರಿಕಲ್ಪನೆಯೊಂದಿಗೆ ಕೆಲಸ ಮಾಡುವಂತೆ, ಸೂಚಿಸಿದರು.

<><><>

**ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ** ಸ್ವೀಕರಿಸಿದ ನರೇಂದ್ರ ಮೋದಿ ಅವರಿಗೆ, ಜೆ.ಡಿ.ಎಸ್. ಧುರೀಣ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭ ಹಾರೈಸಿದ್ದಾರೆ.

<><><>

**ಎನ್.ಡಿ.ಎ. ಮೈತ್ರಿಕೂಟ, ಸರ್ಕಾರದ** ರಚನೆಗೆ ಅಗತ್ಯ ಸಂಖ್ಯಾಬಲ ಹೊಂದಿದ್ದು, ಅವರ ಕಾರ್ಯ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಕಾಂಗ್ರೆಸ್ ವಿಪಕ್ಷದ ಸ್ಥಾನದಲ್ಲಿ ಕ್ರಿಯಾತ್ಮಕವಾಗಿ, ಕರ್ತವ್ಯ ನಿರ್ವಹಿಸಲಿದೆ ಎಂದು, ಕೆ.ಪಿ.ಸಿ.ಸಿ. ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ದಿಲ್ಲಿಯಲ್ಲಿ ಹೇಳಿದ್ದಾರೆ.

<><><>

**ಚಾಮರಾಜನಗರ ಜಿಲ್ಲೆಯ,** ಉಮ್ಮತ್ತೂರು ಗ್ರಾಮದ ಪ್ರಗತಿಪರ ರೈತ ಮಹಿಳೆ ವರ್ಷಾ ಅವರು, ಪ್ರಧಾನಮಂತ್ರಿಯವರ ಪ್ರಮಾಣ ವಚನ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಆಕಾಶವಾಣಿಯ ಜನಪ್ರಿಯ, ಮನ್ ಕಿ ಬಾತ್ ಕಾರ್ಯಕ್ರಮದ ಮೂಲಕ, ಪ್ರಧಾನಮಂತ್ರಿ ಆತ್ಮನಿರ್ಭರ ಯೋಜನೆಯ ಮೂಲಕ ಪ್ರೇರೇಪಣೆ ಪಡೆದವರು. ಬಾಳೆದಿಂಡಿನಿಂದ ವಿವಿಧ ಉತ್ಪನ್ನಗಳನ್ನು ತಯಾರಿಸಿ, ಬದುಕು ಕಟ್ಟಿಕೊಂಡಿದ್ದಾರೆ. ಈ ಹಿಂದೆ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ವರ್ಷಾ ಅವರ ಸಾಧನೆಯನ್ನು, ಗುರುತಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು.

<><><>

**ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆ,** ಕೀಟಜನ್ಯ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಅನೇಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುತ್ತಿದೆ. ಧಾರವಾಡ ಜಿಲ್ಲೆಯಾದ್ಯಂತ ಕೈಗೊಂಡ ಸಿದ್ಧತೆಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಶಶಿ ಪಾಟೀಲ.

<><><>

**ಆರೋಗ್ಯಾಧಿಕಾರಿ ಡಾಕ್ಟರ್ ಶಶಿ ಪಾಟೀಲ್ ಧ್ವನಿ 45 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕಳಿಂಗದ ಸಾಮ್ರಾಟ್ ಅಶೋಕ,** ಕನ್ನಡ ನಾಡಿನಲ್ಲಿ ಸ್ಥಾಪಿಸಿದ ಸನ್ನತ್ತಿ, ಕಣಗನಹಳ್ಳಿ ಶಿಲಾಶಾಸನಗಳು, ಭಾರತ ಇತರೆ ದೇಶಗಳೊಂದಿಗೆ ಹೊಂದಿದ, ಐತಿಹಾಸಿಕ ಬಾಂಧವ್ಯಗಳನ್ನು ತಿಳಿಯುವಲ್ಲಿ, ಮಹತ್ವದ ಪಾತ್ರ ವಹಿಸಿವೆ ಎಂದು, ಭಾರತೀಯ ಪುರಾತತ್ವ ಇಲಾಖೆಯ, ಧಾರವಾಡ ವಲಯದ ಅಧೀಕ್ಷಕಿ, ಡಾಕ್ಟರ್ ರೇಷ್ಮಾ ಸಾವಂತ ಹೇಳಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಆಯೋಜಿತ, ಅಂತಾರಾಷ್ಟ್ರೀಯ ಖ್ಯಾತಿಯ ಇತಿಹಾಸ ತಜ್ಞ, ಧಾರವಾಡದ ಕೀರ್ತಿಶೇಷ, ಡಾಕ್ಟರ್ ಶ್ರೀನಿವಾಸ ರಿತ್ತಿ ಅವರ, 'ಸ್ಟಡೀಸ್ ಇನ್ ಇಂಡಿಯನ್ ಎಪಿಗ್ರಫಿ ಹಿಸ್ಟರಿ, ಆ್ಯಂಡ್ ಕಲ್ಚರ್' ಗ್ರಂಥದ ಲೋಕಾರ್ಪಣೆಯನ್ನು, ನೆರವೇರಿಸಿ ಮಾತನಾಡಿದರು. ಲಿಪಿಯ ಜನ್ಮದ ಜೊತೆ, ಶಿಲಾ ಬರೆಹ ಹಾಗೂ ಶಾಸನಗಳ ಬೆಳವಣಿಗೆ ಆಯಿತು, ಎಂದರು

<><><>

**ಹೆಸರಾಂತ ಪುರಾತತ್ವವಿದ** ಡಾಕ್ಟರ್ ಶ್ರೀನಿವಾಸ ಪಾಡಿಗಾರ, ಗ್ರಂಥ ಪರಿಚಯಿಸಿದರು.

<><><>

**ಬೆಂಗಳೂರಿನ ಮಿಥಿಕ್ ಸೊಸೈಟಿಯ,** ಹಿರಿಯ ಸಂಶೋಧನಾ ಸಂಯೋಜಕ ಡಾಕ್ಟರ್ ವಿಠ್ಠಲ ಪೋತದಾರ, ಶುಭಾಶಂಸನೆ ಮಾಡಿದರು.

<><><>

**ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು** ತೋಟಗಾರಿಕೆ ವಿಜ್ಞಾನಗಳ ಮಹಾವಿದ್ಯಾಲಯ, ಸಾವಯವ ಕೃಷಿ ಸಂಶೋಧನಾ ಕೇಂದ್ರ ಹಾಗೂ ಮೈಸೂರಿನ ಸಹಜ ಸಮೃದ್ಧ, ಶಿವಮೊಗ್ಗದ ವೀರಶೈವ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಎರಡು ದಿನಗಳ ಬೀಜೋತ್ಸವ, ಯಶಸ್ವಿಯಾಗಿ ಸಂಪನ್ನಗೊಂಡಿದೆ. ಬೀಜೋತ್ಸವದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು ತೀರ್ಥ ಗ್ರಾಮದ, ದೇವಧಾನ್ಯ ರೈತ ಉತ್ಪಾದಕ ಕಂಪೆನಿಯ, ಸಿ.ಇ.ಒ. ಸೂರ್ಯಕಾಂತ ಶೇಗುಣಸಿ.

<><><>

**ಸೂರ್ಯಕಾಂತ ಶೇಗುಣಸಿ ಧ್ವನಿ 35 ಸೆಕೆಂದುಗಳು**

<><><>

**ನೈಋತ್ಯ ಮುಂಗಾರು,** ಉತ್ತರ ಒಳನಾಡಿನಲ್ಲಿ ಚುರುಕಾಗಿದೆ. ರಾಜ್ಯದ ಅನೇಕ ಕಡೆ ವ್ಯಾಪಕ ಮಳೆಯಾಗಿದೆ.

<><><>

**ಸತತ ಮಳೆ ಹಿನ್ನೆಲೆ, ಕೃ ಷ್ಣ, ಭೀಮಾ, ದೋಣಿ** ನದಿಗಳಲ್ಲಿ ಹಠಾತ್ ಪ್ರವಾಹ ಅಥವಾ ಉಕ್ಕೇರುವ ಸಾಧ್ಯತೆ ಇದ್ದು, ನದಿ ಪಾತ್ರದ ಕಡೆಗೆ ತೆರಳದಂತೆ, ವಿಜಯಪುರ ಜಿಲ್ಲಾಧಿಕಾರಿ, ಟಿ. ಭೂಬಾಲನ್, ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಜಿಲ್ಲೆ ಹಾಗೂ ತಾಲೂಕು ಮಟ್ಟದ, ಎಲ್ಲ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ, ಜಿಲ್ಲಾಡಳಿತದ ಅನುಮತಿ ಇಲ್ಲದೆ, ಕೇಂದ್ರ ಸ್ಥಾನ ಬಿಡುವಂತಿಲ್ಲ ಎಂದು, ಆದೇಶಿಸಿದ್ದಾರೆ.

<><><>

**ಹಾವೇರಿ ಜಿಲ್ಲೆಯಾದ್ಯಂತ,** ಅತೀ ವೃಷ್ಟಿಯಿಂದ ಜನ, ಜಾನುವಾರು ಜೀವ ಹಾನಿಯಾಗದಂತೆ, ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ ತಿಳಿಸಿದ್ದಾರೆ.

<><><>

**ನಿರಂತರ ಮಳೆಯಿಂದ** ಬೆಳಗಾವಿಯಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ನಗರದ ಅನೇಕ ಪ್ರದೇಶಗಳು ಜಾಲಾವೃತ್ತಗೊಂಡಿವೆ. ಅಂಗಡಿ, ಮುಂಗಟ್ಟುಗಳ ಮಾಲೀಕರು, ಸಂಕಷ್ಟ ಅನುಭವಿಸುವಂತಾಗಿದೆ. ರೈಲ್ವೆ ನಿಲ್ದಾಣ ರಸ್ತೆ, ಶಹಾಪೂರ, ವಡಗಾವಿಯ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ, ನಿವಾಸಿಗಳು ತೊಂದರೆಗೀಡಾದರು. ನಗರದ ಪ್ರಮುಖ ರಸ್ತೆಗಳಲ್ಲಿ, ಸಂಚಾರಕ್ಕೆ ತೊಂದರೆಯುಂಟಾಯಿತು.

<><><>

**ಚಿಕ್ಕಮಗಳೂರು ನಗರದಲ್ಲಿ,** ಒತ್ತುವರಿಯಾಗಿರುವ ರಾಜ ಕಾಲುವೆಯನ್ನು ತೆರವುಗೊಳಿಸುವಂತೆ, ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಶಾಸಕ ಹೆಚ್.ಡಿ. ತಮಯ್ಯ ತಿಳಿಸಿದ್ದಾರೆ.

<><><>

**ಬೆಂಗಳೂರಿನ ಮಾನಸಾ ಕೆ.,** ಭಾನುವಾರ ತುಮಕೂರಿನಲ್ಲಿ ಮುಕ್ತಾಯಗೊಂಡ ರಾಜ್ಯ ಮಹಿಳಾ ಚೆಸ್ ಪಂದ್ಯಾವಳಿಯಲ್ಲಿ, ಅಜೇಯ ಸಾಧನೆಯೊಡನೆ, ಪ್ರಶಸ್ತಿ ತಮ್ಮದಾಗಿಸಿಕೊಂಡರು. ಒಟ್ಟು 9 ಸುತ್ತುಗಳಲ್ಲಿ 8 ಅಂಕಗಳನ್ನು ಮಾನಸಾ ಪಡೆದರು. ಮೂರು ದಿನಗಳ ಕಾಲ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ ಚೆಸ್ ಪಂದ್ಯಾವಳಿಯಲ್ಲಿ, ಬೆಂಗಳೂರಿನ ಕೃಪಾ ಉಕ್ಕಲಿ, ಶ್ರೇಯಾ ರಾಜೇಶ್ ಟೈ ಬ್ರೆಕ್ ಆಧಾರದ ಮೇಲೆ, ಕ್ರಮವಾಗಿ 2 ಮತ್ತು 3ನೇ ಸ್ಥಾನ ಪಡೆದರು. ದಕ್ಷಿಣ ಕನ್ನಡದ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವಾ 4ನೇ ಸ್ಥಾನ ಪಡೆದರು. ಈ ನಾಲ್ವರು ವಿಜೇತ ಚೆಸ್ ಪಟುಗಳು, ಚೆನ್ನೈನಲ್ಲಿ ನಡೆಯಲಿರುವ ರಾಷ್ಟ್ರೀಯ ಮಹಿಳಾ ಚಾಂಪಿಯನ್‌ಶಿಪ್‌ನಲ್ಲಿ, ಕರ್ನಾಟಕವನ್ನು ಪ್ರತಿನಿಧಿಸುವ ಅರ್ಹತೆ ಗಳಿಸಿದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ** ನೀಟ್–ಯುಜಿಯಲ್ಲಿ, ಸಾವಿರದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ, ನೀಡಿದ ಕೃಪಾಂಕ ಪರಿಶೀಲಿಸಲು, ಕೇಂದ್ರ ಶಿಕ್ಷಣ ಸಚಿವಾಲಯ, ಉನ್ನತ ಮಟ್ಟದ ಸಮಿತಿ ರಚಿಸಿದೆ ಎಂದು, ಎನ್.ಟಿ.ಎ. ಮಹಾನಿರ್ದೇಶಕ ಸುಬೋಧ್ ಕುಮಾರ್ ಸಿಂಗ್, ದಿಲ್ಲಿಯಲ್ಲಿ ತಿಳಿಸಿದ್ದಾರೆ.

<><><>

**ದಿವಂಗತ, ಪ್ರೊಫೆಸರ್ ಎಂ.ಕೆ. ಸೇತುರಾವ** ಸ್ಮಾರಕ ಉಪನ್ಯಾಸ ಇಂದು ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಕೃಷಿ ವಿಸ್ತರಣೆ ಮತ್ತು ಸಂವಹನ ನಿರ್ವಹಣೆ ವಿಭಾಗದಲ್ಲಿ, ಆಯೋಜಿತವಾಗಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಎನ್.ಡಿ.ಎ. ಮೈತ್ರಿಕೂಟದ ನಾಯಕರಾದ,** ನರೇಂದ್ರ ಮೋದಿ, ಮೂರನೇ ಅವಧಿಗೆ, ಭಾರತದ ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ.

- **ವಿನಮ್ರರಾಗಿರಿ; ವಿನೀತರಾಗಿರಿ,** ಸಂಪುಟದ ನೂತನ ಸಹೋದ್ಯೋಗಿಗಳಿಗೆ, ಪ್ರಧಾನಮಂತ್ರಿ, ಮಾರ್ಗದರ್ಶನ.
- **ಸಾಮ್ರಾಟ್ ಅಶೋಕನ ಸನ್ನತ್ತಿ** ಮತ್ತು ಕಣಗನಹಳ್ಳಿ ಶಾಸನಗಳು, ಭಾರತದ ಐತಿಹಾಸಿಕ ಬಾಂಧವ್ಯ ತಿಳಿಸುತ್ತವೆ – ಡಾಕ್ಟರ್ ರೇಷ್ಮಾ ಸಾವಂತ.
- **ಶಿವಮೊಗ್ಗದಲ್ಲಿ,** ಎರಡು ದಿನಗಳ ದೇಶಿ ಬೀಜೋತ್ಸವ, ಯಶಸ್ವಿ ಸಂಪನ್ನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**